

# ಮಲಗಿದ 'ಧಾಕಡ್' ಗೆದ್ದ '..ಭುಲಯ್ಯಾ2'

■ ವಿಶಾಖ ಎನ್.

'ಪ್ರಭುತ್ವದ ಪರವಾಗಿ ನಿಂತಾಗ ತೆರಿಗೆ ವಿನಾಯಿತಿ ಸಿಗಬಹುದು, ಪ್ರಶಸ್ತಿ–ಪುರಸ್ಕಾರಗಳೂ ಸಲ್ಲಬಹುದು, ಭದ್ರತೆ ಕೂಡ ದೊರೆಯಬಲ್ಲದು. ಶಾಸಕಾಂಗದ ಅನೇಕರು ಸಿನಿಮಾ ನೋಡುವಂತೆ ಪುಗಸಟ್ಟೆ ಪ್ರಚಾರ ಮಾಡಲೂಬಹುದು. ಹಾಗೆಂದು ಎಲ್ಲವೂ ಹೂವಿನ ಹಾಸಿಗೆಯೇ ಆಗಿರುವುದಿಲ್ಲ. ಜನರಿಗೆ ಒಪ್ಪಿತವಾಗದಿದ್ದರೆ ಚಿತ್ರವನ್ನು ನಿರಾಕರಿಸುವುದರಲ್ಲಿ ಅನುಮಾನವೇ ಇಲ್ಲ. ಅದನ್ನೂ ಸ್ವೀಕರಿಸಬೇಕು' – ಹೀಗೊಂದು ಅರ್ಥ ಬರುವ ಟ್ವೀಟ್ ಅನ್ನು ನಾಯಕಿ ರಿಚಾ ಚೆಡ್ಡಾ ಪೋಸ್ಟ್ ಮಾಡಿದರು. 'ಧಾಕಡ್' ಹಿಂದಿ ಸಿನಿಮಾ ಮಕಾಡೆಯಾದದ್ದಕ್ಕೆ ಅವರು ನಾಯಕಿ ಕಂಗನಾ ರನೋಟ್ ಅವರಿಗೆ ಮಾತಿನಿಂದಲೇ ತಿವಿದ ಬಗೆ ಇದು.

ಸದಾ ಕಾಲ ರಾಜಕೀಯವಾಗಿ ಪ್ರಭುತ್ವವನ್ನೇ ಸಮರ್ಥಿಸುವ ಕಂಗನಾ ತಮ್ಮ ಹೊಸ ಚಿತ್ರದ ಮೊದಲ ದಿನದ ಗಳಿಕೆ ಬರೀ ಒಂದು ಕೋಟಿ ರೂಪಾಯಿ ಎನ್ನುವುದನ್ನು ಕಂಡು ಕಂಗಾಲಾಗಿದ್ದಂತೂ ದಿಟ. ಸಿನಿಮಾ ಅಂದಮೇಲೆ ಸೋಲು, ಗೆಲುವು ಇದ್ದಿದ್ದೇ ಎಂದೂ ರಿಚಾ ಮುಲಾಮು ಹಚ್ಚಿರುವುದಕ್ಕೆ ಅನೇಕರು ಮಿಶ್ರ ಪ್ರತಿಕ್ರಿಯೆ ನೀಡಿದ್ದಾರೆ. ಕಂಗನಾ ಸಿನಿಮಾದ ಸೋಲನ್ನು ಕೆಲವರು 'ಸೆಲೆಬ್ರೇಟ್' ಮಾಡಿರುವುದೂ ಉಂಟು.

ಕಂಗನಾ ಸಿನಿಮಾ ಇಷ್ಟು ಕೆಟ್ಟ ಸೋಲನ್ನು ಕಂಡದ್ದು ಒಂದು ಅಚ್ಚರಿಯಾದರೆ, 'ಭೂಲ್ ಭುಲಯ್ಯಾ 2' ಹಿಂದಿ ಚಿತ್ರ 100 ಕೋಟಿ ರೂಪಾಯಿ ಕ್ಲಬ್ ಸೇರುವ ಮಟ್ಟಕ್ಕೆ ವಹಿವಾಟು ನಡೆಸಿದ್ದು ಇನ್ನೊಂದು ಅಚ್ಚರಿ. ಕಾರ್ತಿಕ್ ಆರ್ಯನ್ ನಾಯಕನಾಗಿರುವ ಈ ಚಿತ್ರವನ್ನು ಅನೀಸ್ ಬಾಜ್ಮೀ ನಿರ್ದೇಶಿಸಿದ್ದಾರೆ. 'ವೆಲ್‌ಕಮ್', 'ಸಿಂಗ್ ಈಸ್ ಕಿಂಗ್', 'ವೆಲ್‌ಕಮ್ ಬ್ಯಾಕ್', 'ಪಾಗಲ್‌ಪಂತಿ' ತರಹದ ಕಚಗುಳಿ ಇಡುವ ಚಿತ್ರಗಳನ್ನು ಮಾಡಿಯೇ ಗೆದ್ದ ನಿರ್ದೇಶಕರು ಇವರು. ಅದೇ ಸೂತ್ರ 'ಭೂಲ್ ಭುಲಯ್ಯಾ 2' ಯಶಸ್ಸಿಗೂ ಕಾರಣವಾಗಿದೆ.



ಈ ಯಶಸ್ಸಿನ ಸಂದರ್ಭದಲ್ಲೇ ಮಾಧ್ಯಮವೊಂದಕ್ಕೆ ಸಂದರ್ಶನ ನೀಡುತ್ತಾ ತಾವು ಹಿಂದೆ ಬಾಲಿವುಡ್ ನಟಿಯ ಜತೆಗೇ ಡೇಟಿಂಗ್ ಮಾಡಿದ್ದನ್ನು ಕಾರ್ತಿಕ್ ಆರ್ಯನ್ ನೆನಪಿಸಿಕೊಂಡರು. ಆ ನಟಿ ಯಾರು ಎಂದು ಮಾತ್ರ ಹೇಳಲಿಲ್ಲ. ಹಿಂದೆ ಸಾರಾ ಅಲಿ ಖಾನ್ ಅವರೊಟ್ಟಿಗೆ ಇವರು ಓಡಾಡಿದ್ದಾಗ, ಇಬ್ಬರ ನಡುವೆ ಪ್ರೇಮಾಂಕುರವಾಗಿದೆ ಎಂಬ ಗುಸುಗುಸು ಕೇಳಿಬಂದಿತ್ತು. ■

# ಸೋನಾಲಿಯ ನೋವಿನ ಚುಕ್ಕಿ

ಸೋನಾಲಿ ಬೇಂದ್ರೆ ಬದುಕನ್ನು ಗೆದ್ದವರು. ಕ್ಯಾನ್ಸರ್ ಅವರನ್ನು ನಾಲ್ಕು ವರ್ಷದ ಹಿಂದೆ ಹಿಂಡತೊಡಗಿತ್ತು. ಆಗ ಅಮೆರಿಕದಲ್ಲಿ ಅವರು ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿದ್ದರು. ಅಂಥದೊಂದು ಪ್ರಕ್ರಿಯೆಯ ನಂತರ ತಮ್ಮ ದೇಹದಲ್ಲಿ 24 ಇಂಚಿನಷ್ಟು ದೊಡ್ಡ ಕಲೆ ಉಳಿದಿತ್ತು ಎಂದು ಅವರು ಈಚೆಗೆ ನೆನಪಿಸಿಕೊಂಡರು.

'ನನಗೆ ಚಿಕಿತ್ಸೆ ನೀಡಿದ ವೈದ್ಯರು ಆಗ ಆದಷ್ಟು ಬೇಗ ನೀವು ಮನೆಗೆ ಗುಣಮುಖರಾಗಿ ಹೋಗಬೇಕು ಎಂದು ಶಸ್ತ್ರಚಿಕಿತ್ಸೆಗೆ ಮೊದಲು ಹೇಳಿದರು. ಪ್ರಕ್ರಿಯೆ ಆದ ಮರುದಿನ ನಾನು ನಡೆಯುವುದೇ ಕಷ್ಟವಿತ್ತು. ಆದರೂ ಗೋಡೆ ಹಿಡಿದುಕೊಂಡು ಸಾವರಿಸಿಕೊಂಡೇ ಹೆಜ್ಜೆಗಳನ್ನಿಟ್ಟದ್ದೆ. ವೈದ್ಯರು ನನ್ನ ಮನೋಬಲ ಹೆಚ್ಚಿಸಲೆಂದೇ ಹಾಗೆ ಹೇಳಿದ್ದರೆಂದು ಆಮೇಲೆ ಸ್ಪಷ್ಟವಾಯಿತು. 24 ಇಂಚಿನ ಕಲೆ ದೇಹದಲ್ಲಿ ಮೂಡಿದಾಗ, ಸೌಂದರ್ಯವನ್ನೇ ನೆಚ್ಚಿಕೊಂಡು ಬಂದ ನಮ್ಮಂಥವರ ಮನಸ್ಸಿಗೆ ಕಷ್ಟವಾಗುತ್ತದೆ, ನಿಜ. ಬದುಕುವುದೇ ಮುಖ್ಯ ಎಂದುಕೊಂಡಾಗ ಇಂತಹ ನೋವೆಲ್ಲ ತಂತಾನೇ ಮರೆಯುತ್ತದೆ' ಎಂದು ಸೋನಾಲಿ ಸ್ಮರಿಸಿದರು.

ಪುಟ್ಟ ಮಕ್ಕಳಿಗೆ ಕಥೆ ಬರೆಯುವುದು, ಅದನ್ನು ಪುಸ್ತಕ ರೂಪದಲ್ಲಿ ಪ್ರಕಟಿಸುವುದು, ಪತಿ ಗೋಲ್ಡಿ ಬೇಲ್ ಜತೆ ಮಾತನಾಡುವಾಗ 'ಬಿ.ಸಿ' (ಬಿಫೋರ್ ಕ್ಯಾನ್ಸರ್), 'ಎ.ಸಿ' (ಆಫ್ಟರ್ ಕ್ಯಾನ್ಸರ್) ಎಂದು ಹೇಳುವುದು ಸೋನಾಲಿ ಅವರಿಗೀಗ ಅಭ್ಯಾಸವಾಗಿದೆ. ರಿಯಾಲಿಟಿ ಶೋ ತೀರ್ಪುಗಾರರಾಗಿ ಕಿರುತೆರೆಯಲ್ಲಿ ಕಾಣಿಸಿಕೊಳ್ಳುವ ಅವಕಾಶವೂ ಅವರದ್ದಾಗಿದೆ.

ನಾಲ್ಕು ವರ್ಷಗಳ ಅವಧಿಯಲ್ಲಿ ಬದಲಾದ ಬದುಕಿನ ಪುಟಗಳನ್ನು ಅವರು ಹೀಗೆ ಪದೇ ಪದೇ ತಿರುವಿ ಹಾಕುತ್ತಿರುತ್ತಾರೆ. 'ಯಾರಿಟ್ಟರೀ ಚುಕ್ಕಿ' ಎಂದು ಅವರ ಸಹನಟ ಶಿವರಾಜ್‌ಕುಮಾರ್ 'ಪ್ರೀತ್ಸೆ' ಚಿತ್ರದ ಹಾಡಿನಲ್ಲಿ ನಟಿಸಿದ್ದರು. ಸೋನಾಲಿ ಆಗ ಮೂಡಿದ ದೊಡ್ಡ ಮಚ್ಚೆಗೆ ಅನ್ವಯಿಸಿ ಆ ಹಾಡನ್ನು ಬೇರೆ ರೀತಿ ಹಾಡಬಹುದು. ■

